ಜಲಾನಯನ ಅಭಿವೃದ್ಧಿ ಇಲಾಖೆ
ಚನ್ನರಾಯಪಟ್ಟಣ

ಮುನ್ನೋಟ :–

ಚನ್ನರಾಯಪಟ್ಟಣ ತಾಲ್ಲೂಕು ಕೃಷಿ ವಲಯದಲ್ಲಿ V| ದಕ್ಷಿಣ ಒಣ ವಲಯ ಪ್ರದೇಶಕ್ಕೆ ಸೇರಿದ್ದು, 6 ಹೋಬಳಿ, 40 ಗ್ರಾಮಪಂಚಾಯಿತಿ ಹಾಗೂ 385 ಗ್ರಾಮಗಳಿಂದ ಕೂಡಿರುತ್ತದೆ. ಒಟ್ಟು ಭೌಗೋಳಿಕ ವಿಸ್ತೀರ್ಣ 103464 ಹೆ. ವಿಸ್ತೀರ್ಣ ಹೊಂದಿದ್ದು, 77423 ಹೆ.ನಲ್ಲಿ ವ್ಯವಸಾಯ ಯೋಗ್ಯ ಭೂಮಿಯಾಗಿದೆ. 18030 ಹೆ. ನೀರಾವರಿ ಪ್ರದೇಶವಾಗಿರುತ್ತದೆ. ಇದರಲ್ಲಿ 89565 ಹೆ. ಪ್ರದೇಶವನ್ನು ಜಲಾನಯನ ಪ್ರದೇಶವಾಗಿದೆ.ಜಲಾನಯನ ಯೋಗ್ಯವಾಗಿರುವ ಪ್ರದೇಶ 55031.61 ಹೆ. ಗುರುತಿಸಲಾಗಿದೆ. ಇದರಲ್ಲಿ ಈಗಾಗಲೇ ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ, ನಬಾರ್ಡ್ ಯೋಜನೆ, ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ಸಮಗ್ರ ಜಲಾನಯನ ನಿರ್ವಹಣೆ ಯೋಜನೆಯಡಿ–33756.53 ಹೆ. ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಉಳಿಕೆ 21275 ಹೆ. ಪ್ರದೇಶವನ್ನು 44 ಜಲಾನಯನ ಪ್ರದೇಶಗಳಾಗಿ ವಿಂಗಡಿಸಿ ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು.

ಈಗ ಹಾಲಿ ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ 18 ಜಲಾನಯನ ಸಂಘಗಳು, ಸುಜಲಾ ಯೋಜನೆಯಡಿ 8 ಕಿರುಜಲಾನಯನಗಳು 2009–10 ನೇ ಸಾಲಿಗೆ ಸಮಗ್ರ ಜಲಾನಯನ ನಿರ್ವಹಣೆ ಯೋಜನೆಯಲ್ಲಿ 6 ಕಿರುಜಲಾನಯನಗಳನ್ನು ಗುರುತಿಸಲಾಗಿದ್ದು, ಒಟ್ಟು ವಿಸ್ತೀರ್ಣ 16200 ಹೆ. ಆಗಿರುತ್ತದೆ. ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆಯು2010–11 ನೇ ಸಾಲಿಗೆ ಮುಕ್ತಾಯಗೊಳ್ಳುತ್ತದೆ.

* ಸುಜಲಾ ಯೋಜನೆಯು ಕಾರೇಹಳ್ಳಿ,ಅಣತಿ,ಕೆಂಬಾಳು, ಬಾಗೂರು,ಬ್ಯಾಡರಹಳ್ಳಿ ಪಂಚಾಯ್ತಿ ವ್ಯಾಪ್ತಿಯ 2 ಗ್ರಾಮಗಳನ್ನು ಒಳಗೊಂಡಿರುತ್ತದೆ.

  8 ಕಿರುಜಲಾನಯನಗಳು ಅಭಿವೃದ್ಧಿ ಪಡಿಸುವ ವಿಸ್ತೀರ್ಣ 4000 ಹೆ.

  8 ಕಿರುಜಲಾನಯನ ಪ್ರದೇಶಗಳು :– 1)ಕೂರದಹಳ್ಳಿ 2) ಕುಂಬಾರಹಳ್ಳಿ 3)ವಳಗೆರೆಹಳ್ಳಿ –1 4) ವಳಗೆರಹಳ್ಳಿ – 2 5) ಚಟ್ಟನಹಳ್ಳಿ 6)ಕೋಡಿಹಳ್ಳಿ 7)ಕಾರೇಹಳ್ಳಿ 8) ಕೆಂಬಾಳು ಕೆರೆ ಕಿರುಜಲಾನಯನಗಳು

ಕಾರೇಹಳ್ಳಿ, ನವಿಲೆ, ಚನ್ನೇನಹಳ್ಳಿ, ರೇಚಿಹಳ್ಳಿ, ಹೊನ್ನನಕೊಪ್ಪಲು, ಅಣತಿ, ನಾಗೇನಹಳ್ಳಿ, ಗೋಡಿಹಳ್ಳಿ, ತಿಪ್ಲಾಪುರ, ವಳಗೇರಹಳ್ಳಿ, ಬಿ.ಭೈರಾಪುರ, ಆದಿಹಳ್ಳಿ, ತಿಮ್ಲಾಪುರ, ಗೊಬ್ಬಳಿಹಳ್ಳಿ, ಬಿದರೆ, ಬೀಚಗೊಂಡನಹಳ್ಳಿ, ಕುಂಬಾರಹಳ್ಳಿ, ಕೆ.ಮಲ್ಲೇನಹಳ್ಳಿ, ಮುದ್ದಿನಹಳ್ಳಿ, ಕಾಳೇನಹಳ್ಳಿ, ಚಾಮರಾಜಪುರ, ಕೂರದಹಳ್ಳಿ, ಬಾಗೂರು.

ಜಲಾನಯನ ಪ್ರದೇಶಗಳನ್ನು ದೂರಸಂವೇದಿ ಉಪಗ್ರಹಗಳಿಂದ ಗುರುತಿಸಲ್ಪಟ್ಟು ಆಯ್ಕೆ ಮಾಡಲಾಗುತ್ತಿದೆ. ಇದರಿಂದ ಭೂಮಿಯ ಮೇಲ್ಮೈ ಲಕ್ಷಣ ಹಾಗೂ ಜಲಾನಯನ ಪ್ರದೇಶದ ವ್ಯಾಪ್ತಿಯನ್ನು ನಿಖರವಾಗಿ ಗುರುತು ಮಾಡಲು ಸಾಧ್ಯವಾಗುತ್ತದೆ.

<u>ಯೋಜನೆಯ ಪರಿಚಯ</u> :– ಸುಜಲಾ–2(ಆರ್.ಐ.ಡಿ.ಎಫ್.) ಜಲಾನಯನ ಅಭಿವೃದ್ಧಿ ಯೋಜನೆಯು ರಾಜ್ಯ ಸರ್ಕಾರವು ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಜನ ಸಹಭಾಗಿತ್ವ ಮತ್ತು ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ರೂಪುಗೊಂಡ ಜಲಾನಯನ ಆಧಾರಿತ ಅಭಿವೃದ್ಧಿ ಕಾರ್ಯಕ್ರಮ. ರಾಜ್ಯ ಸರ್ಕಾರವು ಈ ಯೋಜನೆಯನ್ನು ಒಟ್ಟು ರೂ.180.00 ಕೋಟಿ ಅಂದಾಜಿನೊಂದಿಗೆ ನಬಾರ್ಡ್‌ನಿಂದ ರೂ.144.00 ಕೋಟಿ (ಶೇ.80%)ಸಾಲ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ. (ರಾಜ್ಯ ಸರ್ಕಾರದ ಪಾಲು ರೂ.36.00 ಕೋಟಿ. ಶೇ.20%.

ಉದ್ದೇಶಗಳು :–

1) ರೈತರ ಆದಾಯ ಹೆಚ್ಚಿಸಿ ಜೀವನ ಮಟ್ಟ ಸುಧಾರಿಸವುದು.
2) ಜಲಾನಯನ ವ್ಯಾಪ್ತಿ ಪ್ರದೇಶದ ಕೃಷಿ ಉತ್ಪಾದನೆ/ಬೆಳೆ ಉತ್ಪಾದನೆ ಹೆಚ್ಚಿಸುವುದು.
3) ಅಂತರ್ಜಲ ಮರುಪೂರಕ ಮಾಡುವುದು.
4) ಮಣ್ಣು ಮತ್ತು ಭೂ–ಸವಕಳಿ ತಡೆಗಟ್ಟುವುದು.
5) ಮಳೆ ನೀರು ಸಂಗ್ರಹಿಸುವುದು.
6) ಭೂ–ರಹಿತರು ಮತ್ತು ಆರ್ಥಿಕವಾಗಿ ಹಿಂದುಳಿದ ರೈತ ಸಮುದಾಯಕ್ಕೆ ಜೀವನಾಧಾರಿತ ಚಟುವಟಿಕೆ ಸ್ಥಳೀಯ ಕಸುಬುಗಳಿಗೆ ಪ್ರೋತ್ಸಾಹ ನೀಡುವುದು.
   ಉದಾ:– ಎರೆಹುಳು ಗೊಬ್ಬರ ತಯಾರಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಪಶು ಸಂಗೋಪನೆ, ಕುರಿ ಸಾಗಾಣಿಕೆ,ಟೈಲರಿಂಗ್ ಇತ್ಯಾದಿ.
7) ಸಮುದಾಯ ಆಧಾರಿತ ಸಂಘಟನೆಗಳ ಬಲವರ್ಧನೆ.

ಈಗಾಗಲೆ ಬದು ನಿರ್ಮಾಣ ಕಾಮಗಾರಿ, ಅರಣ್ಯ ಸಸಿಗಳನ್ನು ತೋಟಗಾರಿಕ ಸಸಿಗಳನ್ನು ನೆಡುವುದು. ಸಾಮರ್ಥ್ಯ ಬಲವರ್ಧನೆ ಹಾಗೂ ಕೌಶಲ್ಯ ತರಬೇತಿಗಳು ಮುಂದುವರಿದಿದೆ.

ಸುಜಲಾ–2(ಆರ್.ಐ.ಡಿ.ಎಫ್.)ಯೋಜನೆಯಡಿ ಉಪಜಲಾನಯನವಾರು ಕೈಗೊಳ್ಳಲಾದ ಕಾಮಗಾರಿಗಳ ವಿವರ

2009–10 ರಿಂದ ಜೂನ್–2010 ವರೆಗೆ

ಉಪ ಜಲಾನಯನದ ಹೆಸರು	ತೋಟಗಾರಿಕಾಘಟಕ		ಅರಣ್ಯ ಘಟಕ		2010–11ನೇ ಸಾಲಿನಲ್ಲಿ ಬೆಳೆಸಿರುವ ಅರಣ್ಯಸಸಿಗಳು	ಮಣ್ಣು ಮತ್ತು ನೀರು ಸಂರಕ್ಷಣಾ ಚಟುವಟಿಕೆ			ಇ.ಎ.ಪಿ. ತರಬೇತಿ		ಆರ್ಥಿಕ ಪ್ರಗತಿ ಒಟ್ಟು ಮೊತ್ತ (ಲಕ್ಷ ರೂ.)
	ಮಾವು	ಸಪೋಟ	ನೆಟ್ಟ ಸಸಿಗಳ ಸಂಖ್ಯೆ	ಕ್ಷೇತ್ರ(ಹೆ)		ಬದು ನಿರ್ಮಾಣ (ಮೀ)	ಕೃಷಿಕೊಳ (ಸಂಖ್ಯೆ)	ಬಿ.ಆರ್‌ಪಿ.(ಸಂಖ್ಯೆ)	ತಂಡಗಳ ಸಂಖ್ಯೆ	ತರಬೇತಿ ಪಡೆದವರ ಸಂಖ್ಯೆ	
ಕೆಂಬಾಳು	–	–	63150	161.50	28500.00	8598	–	27	9	300	23.770
ಮರಗೂರು	–	–	10900	109.00	18600.00	6046	–	21	6	200	13.316
ಸಾಸಲಹಳ್ಳಿ	–	–	23800	238.00	27900.00	36703	3	–	10	300	19.028

2009–10 ನೇ ಸಾಲಿನಲ್ಲಿ ಸಮಗ್ರ ಜಲಾನಯನ ಯೋಜನೆ ಜಾರಿಗೆ ಬಂದಿದ್ದು, ಅತ್ತಿಹಳ್ಳಿ ಉಪಜಲಾನಯನ ಪ್ರದೇಶದಲ್ಲಿ

ಒಟ್ಟು 3198.55 ಹೆ. ಪ್ರದೇಶ ಅಭಿವೃದ್ಧಿಗಾಗಿ ಗುರುತಿಸಲಾಗಿದ್ದು 6 ಕಿರು ಜಲಾನಯನಗಳಾಗಿ ವಿಂಗಡಿಸಲಾಗಿದೆ.

ಇವುಗಳಲ್ಲಿ 1) ಹನುಮಂತಪುರ ಕಿರುಜಲಾನಯನ – 415.48 ಹೆ.
2) ಬದ್ದೇಕೆರೆ ಕೆರೆ ಕಿರುಜಲಾನಯನ – 677.40
3) ಹೆಬ್ಬಳಲು ಕೆರೆ ಕಿರುಜಲಾನಯನ – 598.15
4) ದೊಡ್ಡೇರಿ ಕೆರೆ ಕಿರುಜಲಾನಯನ – 462.78
5) ಬಾಣನ ಕೆರೆ ಕಿರುಜಲಾನಯನ – 507.68

6) ಕಗ್ಗೆರೆ ಕೆರೆ ಕಿರುಜಲಾನಯನ – 536.76

ಒಟ್ಟು – 3198.55

ಈ ಕಿರುಜಲಾನಯನಗಳಲ್ಲಿ ಪ್ರವೇಶದ್ವಾರ ಚಟುವಟಿಕೆ ಕಾರ್ಯಕ್ರಮ ಮುಂದುವರಿದಿದ್ದು, ಕಟಿಗೆ ಹಳ್ಳಿ, ದೊಡ್ಡೇರಿ ಕಾವಲ್, ಬಾಣನಕೆರೆ, ಹೆಬ್ಬಳಲು, ಗೌಡಗೆರೆ ಕಾವಲ್ ಗಳಲ್ಲಿ ಗೋಕಟ್ಟೆ ನಿರ್ಮಾಣ ಕಾಮಗಾರಿ ತೆಗೆದುಕೊಳ್ಳಲಾಗಿದೆ. ಮುಂದಿನ 4 ವರ್ಷಗಳ ಕಾಲ ನಿರಂತರವಾಗಿ ಯೋಜನೆ ಜಾರಿಯಲ್ಲಿರುತ್ತದೆ. ಸರ್ಕಾರೇತರ ಸಂಸ್ಥೆಯಿಂದ ಸ್ವಸಹಾಯ ಸಂಘಗಳ

ಸಮಸ್ಯಾತ್ಮಕ ಭೂಮಿ ಅಭಿವೃದ್ಧಿ:–

ಕಾವೇರಿ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ. ಸಮಸ್ಯಾತ್ಮಕ ಮಣ್ಣನ್ನು ಮಣ್ಣು ಪರೀಕ್ಷೆ ಆಧಾರದ ಮೇಲೆ ಗುರುತಿಸಿ, ಈ ಕೆಳಗಿನಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ.

2009–10 ನೇ ಸಾಲಿನಲ್ಲಿ ಪಡುವನಹಳ್ಳಿ ರೂ.5.21 ಲಕ್ಷಗಳಲ್ಲಿ 29 ಹೆ. ಪ್ರದೇಶದಲ್ಲಿ ಕಾಮಗಾರಿ ನಡೆಸಲಾಗಿದೆ.

ಮಳೆ ನೀರು ಕೊಯ್ಲು:–

2009–10 ನೇ ಸಾಲಿನಲ್ಲಿ ದೂತನೂರು ಕಾವಲಿನಲ್ಲಿ ರೂ.3.96 ಲಕ್ಷ ರೂ.ಗಳ ವೆಚ್ಚದಲ್ಲಿ ಸಾಲುಬದು ನಿರ್ಮಾಣ ಮಾಡಲಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆ,
ಚ್ನನರಾಯಪಟ್ಟಣ.

ಮಳೆನೀರು ಕೊಯ್ಲು ವಿನ್ಯಾಸ ನಿರ್ಮಾಣ ಯೋಜನೆ.

ಗ್ರಾಮ ಪಂಚಾಯಿತಿ : ಬಳದರೆ. ಗ್ರಾಮ ; ದೂತನೂರು ಕಾವಲ್

ಕಾಮಗಾರಿ : ನಾಲಾಬದು

ಕಾಮಗಾರಿ ಸ್ಥಳದ ಸರ್ವೆ ನಂ	:	62/P
ಕಾಮಗಾರಿ ವೆಚ್ಚ	;	ರೂ. 3.96 ಲಕ್ಷ
ಜಲಾನಯನ ವಿಸ್ತೀರ್ಣ	:	90 ಹೆ.
ನಾಲಾಬದುವಿನ ಉದ್ದ	:	75 ಮೀ
ನೀರು ಹರಡುವ ಉದ್ದ	:	210 ಮೀ
ನೀರು ಹರಡುವ ಅಗಲ	;	70 ಮೀ
ನೀರು ನಿಲ್ಲಿಸುವ ಎತ್ತರ	:	2.10ಮೀ
ಅಂದಾಜು ನೀರಿನ ಸಂಗ್ರಹಣೆ	:	4.96 ಟಿಸಿಎಂ.

ಕಾಮಗಾರಿಯಿಂದಾಗುವ ಪ್ರಯೋಜನ : ಅಂತರ್ಜಲ ಮಟ್ಟ ಹೆಚ್ಚಾಗುವುದು ಸುತ್ತಮುತ್ತಲಿರುವ ಸುಮಾರು 18–20 ಕೊಳವೆಬಾವಿಗಳ ನೀರಿನ ಮಟ್ಟ ಹೆಚ್ಚಾಗುವುದು. ಈ ಕಾಮಗಾರಿ ಪಕ್ಕದಲ್ಲಿರುವ ಜಮೀನಿನ ರೈತರು ಮಳೆಯ ಅಭಾವದ ಕಾಲದಲ್ಲಿ ತಮ್ಮ ಬೆಳೆಗಳಿಗೆ ನೀರಾವರಿ ಸೌಲಭ್ಯ ಒದಗಿಸಿ, ಉತ್ಪಾದನೆ ಹೆಚ್ಚಿಸಿಕೊಳ್ಳುವುದು. ಜಾನುವಾರುಗಳಿಗೆ, ಕಾಡುಪ್ರಾಣಿಗಳಿಗೆ ಕುಡಿಯುವ ನೀರು ದೊರಕಿಸಿ ಕೊಟ್ಟಂತಾಗಿದೆ. ಸದರಿ ಹಂಗಾಮಿನಲ್ಲಿ ಮಳೆ ಇಲ್ಲದೆ ಒಣಗುತ್ತಿರುವ 9.00 ಎಕರೆ ಆಲೂಗೆಡ್ಡೆ ಬೆಳೆಗೆ ನಾಲಾಬದುವಿನಿಂದ ನೀರು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮೀನು ಸಾಕಾಣಿಕೆ ಕೈಗೊಳ್ಳಲು ಸುತ್ತಲಿನ ರೈತರು ಆಸಕ್ತಿ ಹೊಂದಿರುತ್ತಾರೆ. ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ.

ತಾಲ್ಲೂಕು ಜಲಾನಯನ ಅಭಿವೃದ್ಧಿಅಧಿಕಾರಿ,
ಚನ್ನರಾಯಪಟ್ಟಣ

Technical DWDO Letters

ಯಶೋಗಾದೆ
ಮೀನುಸಾಕಣಿಕೆಯಿಂದ ಹೆಚ್ಚುವರಿ ಆದಾಯ

ಬೆಳೆದ ಮೀನಿನೊಂದಿಗೆ ಶ್ರೀ.ಗಣೇಶ್‌ಗೌಡ ಬಿನ್ ತಿಮ್ಮೇಗೌಡ

***

ಶ್ರೀ.ಗಣೇಶ್‌ಗೌಡ ಬಿನ್ ತಿಮ್ಮೇಗೌಡ, ಬಿಳಕೆರೆ ಗ್ರಾಮ ಹಿರಿಸಾವೆ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು ಇವರ ಜಮೀನಿನಲ್ಲಿ 2007-08 ನೇ ಸಾಲಿನಲ್ಲಿ ಸುವರ್ಣ ಕೃಷಿಹೊಂಡ ಯೋಜನೆಯಲ್ಲಿ 10x10x3 ಮೀ.ಅಳತೆಯ ಕೃಷಿಹೊಂಡವನ್ನು ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ನಿರ್ಮಿಸಿ ಕೊಡಲಾಗಿತ್ತು. ಶ್ರೀ.ಗಣೇಶ್‌ಗೌಡ ಬಿನ್ ತಿಮ್ಮೇಗೌಡ, ಬಿಳಕೆರೆ ಗ್ರಾಮ. ಇವರನ್ನು ಈ ಕೃಷಿಹೊಂಡ'ದಲ್ಲಿ ಮೀನು ಸಕಾಣಿಕೆ ಮಾಡಲು ಪ್ರೋತ್ಸಾಹ ನೀಡಿದ್ದರಿಂದ ಮೀನು ಸಕಾಣಿಕೆ ಮಾಡಲು ಆಸಕ್ತಿ ಹೊಂದಿದರು. ಈ ಕೃಷಿಹೊಂಡಕ್ಕೆ 2009-10 ನೇ ಸಾಲಿನಲ್ಲಿ ಇಲಾಖಾವತಿಯಿಂದ ಮೀನುಸಾಕಣಿಕೆ ಯೋಜನೆಯಡಿಯಲ್ಲಿ **ರೋಹು ಹಾಗೂ ಕಾಟ್ಲಾ** ಜಾತಿಯ ನೂರು ಮೀನುಮರಿಗಳನ್ನು 2009 ರ ಸೆಪ್ಟಂಬರ್ ಮಾಹೆಯಲ್ಲಿ ಬಿಡಲಾಯಿತು. 2010 ರ ಮೇ ಮಾಹೆಯ ಕೊನೆವಾರದಲ್ಲಿ ಮೀನುಗಳನ್ನು ಹಿಡಿಯಲಾಗಿದ್ದು, ಪ್ರತಿ ಮೀನು ಅಂದಾಜು 1 ಕೆ.ಜಿ ಯಿಂದ 1.250 ಕೆ.ಜಿ ತೂಕ ಬಂದಿರುತ್ತದೆ. ಇಲಾಖೆಯಿಂದ ನೀಡಿದ್ದ ಆಹಾರದ ಜೊತೆಗೆ ಮನೆಯ ಆಹಾರವಾದ ಅನ್ನ ಹಾಗೂ ರಾಗಿಮುದ್ದೆಯನ್ನು ಸಹ ನೀಡಲಾಗಿತ್ತು.

ಇಳುವರಿ ಹಾಗೂ ಆದಾಯದ ವಿವರ ಈ ಕೆಳಕಂಡಂತೆ ಇದೆ

ಮೀನು ಉತ್ಪಾದನೆ : 94 ಕೆ.ಜಿ

ಮೀನು ಮಾರಾಟ ಧರ ಪ್ರತಿ ಕೆ.ಜಿಗೆ ರೂ. 40 ರಂತೆ ಬಂದ ಆದಾಯ : ರೂ. 3760.00

9 ತಿಂಗಳವರೆಗೆ ಮೀನುಸಾಕಣಿಕೆಗೆ ತಗುಲಿದ ಖರ್ಚು : ರೂ. 815.00

ನಿವ್ವಳ ಆದಾಯ : ರೂ. 2945.00

ಜಲಾನಯನ ಅಭಿವೃದ್ಧಿ ಇಲಾಖೆ,
ಚ್ನನರಾಯಪಟ್ಟಣ.

ಮಳೆನೀರು ಕೊಯ್ಲು ವಿನ್ಯಾಸ ನಿರ್ಮಾಣ ಯೋಜನೆ.

ಗ್ರಾಮ ಪಂಚಾಯಿತಿ : ಬಳದರೆ. ಗ್ರಾಮ ; ದೂತನೂರು ಕಾವಲ್

ಕಾಮಗಾರಿ : ನಾಲಾಬದು

ಕಾಮಗಾರಿ ಸ್ಥಳದ ಸರ್ವೆ ನಂ	:	62/P
ಕಾಮಗಾರಿ ವೆಚ್ಚ	;	ರೂ. 3.96 ಲಕ್ಷ
ಜಲಾನಯನ ವಿಸ್ತೀರ್ಣ	:	90 ಹೆ.
ನಾಲಾಬದುವಿನ ಉದ್ದ	:	75 ಮೀ
ನೀರು ಹರಡುವ ಉದ್ದ	:	210 ಮೀ
ನೀರು ಹರಡುವ ಅಗಲ	;	70 ಮೀ
ನೀರು ನಿಲ್ಲಿಸುವ ಎತ್ತರ	:	2.10ಮೀ
ಅಂದಾಜು ನೀರಿನ ಸಂಗ್ರಹಣೆ	:	4.96 ಟಿಸಿಎಂ.

ಕಾಮಗಾರಿಯಿಂದಾಗುವ ಪ್ರಯೋಜನ : ಅಂತರ್ಜಲ ಮಟ್ಟ ಹೆಚ್ಚಾಗುವುದು ಸುತ್ತಮುತ್ತಲಿರುವ ಸುಮಾರು 18–20 ಕೊಳವೆಬಾವಿಗಳ ನೀರಿನ ಮಟ್ಟ ಹೆಚ್ಚಾಗುವುದು. ಈ ಕಾಮಗಾರಿ ಪಕ್ಕದಲ್ಲಿರುವ ಜಮೀನಿನ ರೈತರು ಮಳೆಯ ಅಭಾವದ ಕಾಲದಲ್ಲಿ ತಮ್ಮ ಬೆಳೆಗಳಿಗೆ ನೀರಾವರಿ ಸೌಲಭ್ಯ ಒದಗಿಸಿ, ಉತ್ಪಾದನೆ ಹೆಚ್ಚಿಸಿಕೊಳ್ಳುವುದು. ಜಾನುವಾರುಗಳಿಗೆ, ಕಾಡುಪ್ರಾಣಿಗಳಿಗೆ ಕುಡಿಯುವ ನೀರು ದೊರಕಿಸಿ ಕೊಟ್ಟಂತಾಗಿದೆ. ಸದರಿ ಹಂಗಾಮಿನಲ್ಲಿ ಮಳೆ ಇಲ್ಲದೆ ಒಣಗುತ್ತಿರುವ 9.00 ಎಕರೆ ಆಲೂಗೆಡ್ಡೆ ಬೆಳೆಗೆ ನಾಲಾಬದುವಿನಿಂದ ನೀರು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮೀನು ಸಾಕಣಿಕೆ ಕೈಗೊಳ್ಳಲು ಸುತ್ತಲಿನ ರೈತರು ಆಸಕ್ತಿ ಹೊಂದಿರುತ್ತಾರೆ. ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ.

ತಾಲ್ಲೂಕು ಜಲಾನಯನ ಅಭಿವೃದ್ಧಿಅಧಿಕಾರಿ,
ಚನ್ನರಾಯಪಟ್ಟಣ

ಯಶೋಗಾದೆ
ಮೀನುಸಾಕಣಿಕೆಯಿಂದ ಹೆಚ್ಚುವರಿ ಆದಾಯ

ಬೆಳೆದ ಮೀನಿನೊಂದಿಗೆ ಶ್ರೀ.ಗಣೇಶ್‌ಗೌಡ ಬಿನ್ ತಿಮ್ಮೇಗೌಡ

***

ಶ್ರೀ.ಗಣೇಶ್‌ಗೌಡ ಬಿನ್ ತಿಮ್ಮೇಗೌಡ, ಬಿಳಿಕೆರೆ ಗ್ರಾಮ ಹಿರಿಸಾವೆ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು ಇವರ ಜಮೀನಿನಲ್ಲಿ 2007-08 ನೇ ಸಾಲಿನಲ್ಲಿ ಸುವರ್ಣ ಕೃಷಿಹೊಂಡ ಯೋಜನೆಯಲ್ಲಿ 10x10x3 ಮೀ.ಅಳತೆಯ ಕೃಷಿಹೊಂಡವನ್ನು ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ನಿರ್ಮಿಸಿ ಕೊಡಲಾಗಿತ್ತು. ಶ್ರೀ.ಗಣೇಶ್‌ಗೌಡ ಬಿನ್ ತಿಮ್ಮೇಗೌಡ, ಬಿಳಿಕೆರೆ ಗ್ರಾಮ. ಇವರನ್ನು ಈ ಕೃಷಿಹೊಂಡ'ದಲ್ಲಿ ಮೀನು ಸಕಾಣಿಕೆ ಮಾಡಲು ಪ್ರೋತ್ಸಾಹ ನೀಡಿದ್ದರಿಂದ ಮೀನು ಸಕಾಣಿಕೆ ಮಾಡಲು ಆಸಕ್ತಿ ಹೊಂದಿದರು. ಈ ಕೃಷಿಹೊಂಡಕ್ಕೆ 2009-10 ನೇ ಸಾಲಿನಲ್ಲಿ ಇಲಾಖಾವತಿಯಿಂದ ಮೀನುಸಾಕಣಿಕೆ ಯೋಜನೆಯಡಿಯಲ್ಲಿ **ರೋಹು ಹಾಗೂ ಕಾಟ್ಲಾ** ಜಾತಿಯ ನೂರು ಮೀನುಮರಿಗಳನ್ನು 2009 ರ ಸೆಪ್ಟಂಬರ್ ಮಾಹೆಯಲ್ಲಿ ಬಿಡಲಾಯಿತು. 2010 ರ ಮೇ ಮಾಹೆಯ ಕೊನೆವಾರದಲ್ಲಿ ಮೀನುಗಳನ್ನು ಹಿಡಿಯಲಾಗಿದ್ದು, ಪ್ರತಿ ಮೀನು ಅಂದಾಜು 1 ಕೆ.ಜಿ ಯಿಂದ 1.250 ಕೆ.ಜಿ ತೂಕ ಬಂದಿರುತ್ತದೆ. ಇಲಾಖೆಯಿಂದ ನೀಡಿದ್ದ ಆಹಾರದ ಜೊತೆಗೆ ಮನೆಯ ಆಹಾರವಾದ ಅನ್ನ ಹಾಗೂ ರಾಗಿಮುದ್ದೆಯನ್ನು ಸಹ ನೀಡಲಾಗಿತ್ತು.

ಇಳುವರಿ ಹಾಗೂ ಆದಾಯದ ವಿವರ ಈ ಕೆಳಕಂಡಂತೆ ಇದೆ

ಮೀನು ಉತ್ಪಾದನೆ : 94 ಕೆ.ಜಿ

ಮೀನು ಮಾರಾಟ ಧರ ಪ್ರತಿ ಕೆ.ಜಿಗೆ ರೂ. 40 ರಂತೆ ಬಂದ ಆದಾಯ : ರೂ. 3760.00

9 ತಿಂಗಳವರೆಗೆ ಮೀನುಸಾಕಣಿಕೆಗೆ ತಗುಲಿದ ಖರ್ಚು : ರೂ. 815.00

ನಿವ್ವಳ ಆದಾಯ : ರೂ. 2945.00